ಅ) ಸವಣೂರು ಶಿರವಾಡ ರಸ್ತೆಯನ್ನು ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ತೆಗೆದುಕೊಳ್ಳುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಸವಣೂರು–ಶಿರವಾಡ ರಸ್ತೆಯು 44.10 ಕಿ.ಮೀ. ಉದ್ದವಿದೆ. ಸವಣೂರು -ಹರವಿ ರಸ್ತೆಯು 12 ಕಿ.ಮೀ. ಉದ್ದವಿದೆ.

ಇ) ಸದರೀ ರಸ್ತೆಯು ಜಿಲ್ಲಾಪರಿಷತ್ತಿನ ವ್ಯಾಪ್ತಿಯಲ್ಲಿದ್ದು ಇತ್ತೀಚಿನ ಮಳೆಗಾಲದಲ್ಲಿ ಕೆಲವು ಭಾಗಗಳು ಕೆಟ್ಟಿದ್ದು ವಾಹನ ಸಂಚಾರಕ್ಕೆ ಅನಾನುಕೂಲ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ರಸ್ತೆಯ ತುರ್ತು ರಿಪೇರಿ ಕೆಲಸವನ್ನು ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗದವರು ತೆಗೆದುಕೊಂಡಿರುತ್ತಾರೆ.

ಹುಬ್ಬಳ್ಳಿಯಲ್ಲಿ ವಾಯುದೂತ್ ನಿಲ್ದಾಣ

3592 - ಶ್ರೀ ಮಂಜುನಾಥ್ ಸಿ.ಕುನ್ನೂರ (ಶಿಗ್ಗಾಂವ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿಯಲ್ಲಿ ವಾಯುದೂತ ನಿಲ್ದಾಣವು ಪ್ರಾರಂಭವಾಗಿದೆಯೇ?

ಆ) ಹಾಗಿದ್ದಲ್ಲಿ, ಸದರೀ ನಿಲ್ದಾಣಕ್ಕಾಗಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಂದ ಖರ್ಚಾದ ಹಣವೆಷ್ಟು?

ಇ) ಸದರೀ ನಿಲ್ದಾಣದಲ್ಲಿ ವಾಯುದೂತ್ ಸಂಚಾರವು ಈವರೆಗೂ ಪ್ರಾರಂಭವಾಗದಿರಲು ಕಾರಣವೇನು?

ಈ) ಎಂದಿನಿಂದ ಈ ಸಂಚಾರವು ಪ್ರಾರಂಭವಾಗುವುದು?

ಶ್ರೀ ಜಿ.ಪಿಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಮಂತ್ರಿ) :

ಅ) ಪ್ರಾರಂಭವಾಗಿತ್ತು.

ಆ) ಈ ಕಾಮಗಾರಿಯನ್ನು ರಾಜ್ಯ ಸರ್ಕಾರದ ನಿಧಿಯಿಂದ ತೆಗೆದುಕೊಳ್ಳಲಾಗಿದೆ. ಈ ವಿಮಾನ ನಿಲ್ದಾಣದ ನಿರ್ಮಾಣಕ್ಕಾಗಿ ಮಾರ್ಚ್ 1991ರ ವರೆಗೆ 154.31 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ, ಹಾಗೂ ಈ ನಿಲ್ದಾಣ ವಿಸ್ತರಣೆಗಾಗಿ ಜುಲೈ 1991ರ ವರೆಗೆ 88.99 ಲಕ್ಷ ರೂ.ಗಳು ಖರ್ಚಾಗಿರುತ್ತವೆ.

ಇ) ಈ ನಿಲ್ದಾಣದಲ್ಲಿ ಮೇ 1989ರಿಂದ ಡಿಸೆಂಬರ 1989ರವರೆಗೆ "ಡಾರ್ನಿಯರ್" ವಿಮಾನದ ಸಂಚಾರವು ವಾಯುದೂತ ನಿಗಮದವರಿಂದ ನಡೆಸಲಾಗಿತ್ತಿತ್ತು. ಈ ವಿಮಾನ ನಿಲ್ದಾಣದ ಬಳಿ ಇರುವ 110 ಕಿ.ಹೈ. ವ್ಯಾಟ್ಸ್‌ನ ವಿದ್ಯುತ್ ತಂತಿಯಿಂದ ವಿಮಾನಯಾನಕ್ಕೆ ಅಡಚಣೆಯಾಗುವುದು ಹಾಗೂ ವಾಯುದೂತ್ ನಿಗಮದಲ್ಲಿ ವಿಮಾನಗಳ ಕೊರತೆಯಿದೆ ಎಂಬುದಾಗಿ ತಿಳಿಸಿ ಜನವರಿ 1990ರಲ್ಲಿ ಈ ಸೇವೆಯನ್ನು ನಿಲ್ಲಿಸಲಾಗಿದೆ.

ಈ) 110 ಕಿ.ವ್ಯಾಟ್ಸ್‌ನ ವಿದ್ಯುತ್ ತಂತಿಯನ್ನು ಸ್ಥಳಾಂತರಿಸಿದ ನಂತರ ಈ ಸಂಚಾರವನ್ನು ಪ್ರಾರಂಭಿಸುವ ವಾಯುದೂತ ನಿಗಮದವರೊಂದಿಗೆ ವ್ಯವಹರಿಸಲಾಗುವುದು.

ಚಿತ್ತಾಪುರ ತಾಲ್ಲೂಕಿನಲ್ಲಿ ಸರ್ಕಾರಿ ಕಟ್ಟಡಗಳು

3013 - ಶ್ರೀ ಬಾಬುರಾವ್ ಚಿಂಚನಸುರ್ (ಚಿತ್ತಾಪುರ) ಮಾನ್ಯ ಲೋಕೋಪಯೋಗಿ ಇಲಾಖೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎರಡನೇ ದೊಡ್ಡ ತಾಲ್ಲೂಕ್ ಆಗಿರುವ ಚಿತ್ತಾಪುರ ನಗರದಲ್ಲಿ ಹಾಳು ಬಿದ್ದಿರುವ ಸರ್ಕಾರಿ ಕಟ್ಟಡಗಳ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?